ಮರುಕಳಿಕೆ

# ಮಹಾಮಾರ್ಗಿ ಕಲಬುರ್ಗಿ



ಗಾಯತ್ರಿ ನಾವಡ

ನಾಡು ಕಂಡ ಒಂದು ಅದ್ಭುತ ಎಂ.ಎಂ. ಕಲಬುರ್ಗಿ. ಕಾಯಕ ನಿಷ್ಠೆಯಲ್ಲಿ ಅವರೊಬ್ಬ ಸ್ಥಾವರ, ಕ್ರಿಯಾಶಕ್ತಿಯಲ್ಲಿ ಅವರೊಬ್ಬ ಜಂಗಮ. ಈ 'ಸ್ಥಾವರ- ಜಂಗಮ'ದ ಅನುಸಂಧಾನದಲ್ಲಿ ತೆರೆದದ್ದು ಶೋಧನ ಲೋಕದ ಮಹಾಮಾರ್ಗ-ಅದುವೇ ಮಹಾಮಾರ್ಗಿ ಕಲಬುರ್ಗಿ.

ಅಂದು 2015ರ ಆಗಸ್ಟ್ 30ರ ಬೆಳಗು ಕತ್ತಲಾದ ಬಗೆಯೇ ಒಂದು ದುರಂತ ಯೋಗ. ನಾನು ಆಗಷ್ಟೇ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಅಖಿಲ ಕರ್ನಾಟಕ ಮಹಿಳಾ ಸಮ್ಮೇಳನದಲ್ಲಿ ಭಾಗಿಯಾಗಿ ಬೆಳಗಾವಿಯಿಂದ ಮನೆಗೆ ಮರಳಿದ್ದೆ. ಟಿವಿ ಹಚ್ಚಿದಾಗ ಕ್ರೌರ್ಯದ ಗುಂಡಿಗೆ ಕಲಬುರ್ಗಿಯವರ 'ದೇಹ' ಬಲಿಯಾದ ದುರಂತವನ್ನು ಬಿತ್ತರಿಸಿತು. ನಾವು ಬೆಚ್ಚಿಬಿದ್ದೆವು. ಆ ಸಾವನ್ನು ಸ್ವೀಕರಿಸುವ ಸ್ಥಿತಿ ನಮ್ಮದಾಗಿರಲಿಲ್ಲ. ನಾಲ್ಕಾರು ಚಾನಲ್ ಸುತ್ತಾಡಿದೆವು. ಎಂಟು ದಿಕ್ಕಿನಲ್ಲೂ ಅದೇ ಕಥನ: ಇಡೀ ನಾಡಿಗೆ ಸಂಕಟದ ಉರಿ ಹೊತ್ತಿ ಉರಿದ ಹೊತ್ತದು. ಆದರೆ ಸತ್ಯಕ್ಕೆ ಅಳಿವಿಲ್ಲ. ಸತ್ಯ ಎನ್ನುವುದು ಕಾಲದ ಕಟ್ಟನ್ನು ಮೀರಿದ್ದು, ಹಲವರು ಬದುಕಿದ್ದೂ ಸಾಯುತ್ತಾರೆ, ಕೆಲವರು ಸತ್ತೂ ಬದುಕುತ್ತಾರೆ. ಹಾಗೆ ಸತ್ತೂ ಬದುಕಿದವರು ಕಲಬುರ್ಗಿಯವರು. ದುರಂತ ಎಂದರೆ ಕೊಲೆಗೆ ಸಾವು ಗೊತ್ತೇ ಹೊರತು ಬದುಕು ಎನ್ನುವುದರ ಅರಿವು ಎಲ್ಲಿದೆ?

ಈ ಬಗೆಯ ಸಾಂಸ್ಕೃತಿಕ ದಾಳಿ ನಮಗೆ ಹೊಸದಲ್ಲ, ಕಲಬುರ್ಗಿಯವರಿಗೂ ಇದು ಮೊದಲಲ್ಲ. ಮಾತು-ಮಥನಕ್ಕೆ ಬಾಯಿಲ್ಲದಾಗ, ಸಂವಾದ-ವಾಗ್ವಾದಕ್ಕೆ ಎಡೆಯಿಲ್ಲದಾಗ, ಕ್ರೌರ್ಯ ತನ್ನ ಅಟ್ಟಹಾಸ ಮೆರೆಯುವುದು ಸಹಜ. ಸಂಶೋಧನೆಯಲ್ಲಿ 'ಇದಮಿತ್ಥಂ' ಅನ್ನುವುದಿಲ್ಲ. ಇದೇ ಸತ್ಯ, ಇದೇ ಅಂತಿಮ ಅಂತಿಲ್ಲ. ಒಂದು ಪ್ರಕಟಿತ ಸತ್ಯ ಅಥವಾ ಒಬ್ಬ ವ್ಯಕ್ತಿ ತನ್ನ ಅಭಿಪ್ರಾಯ ಮಂಡಿಸಲು ಎಲ್ಲರೂ ಸ್ವತಂತ್ರರು. ಹಾಗೆಯೇ ಅದನ್ನು ಸ್ವೀಕರಿಸಲು ಅಥವಾ ನಿರಾಕರಿಸಲು ಎಲ್ಲರೂ ಅಷ್ಟೇ ಸ್ವತಂತ್ರರು. ಒಂದು ಸತ್ಯಕ್ಕೆ ಇನ್ನೊಂದು ಮತ್ತೊಂದು ಸತ್ಯವನ್ನು ತೆರೆದಿಡುವ ಮೂಲಕ ಯಾವುದೇ ಒಂದು ವಿಚಾರ, ಒಂದು ಸಂಶೋಧನೆ ಬೆಳೆಯುವುದು. ಹಾಗಾಗಿ ಎದುರಾದ ಯಾವುದೇ ಸವಾಲು, ಸಂಘರ್ಷಕ್ಕೆ ಕೊಲೆ ಯಾವತ್ತೂ ಒಂದು ಪರಿಹಾರವಾಗದು, ಆಗಬಾರದು ಕೂಡ. ಹಾಗಾದರೆ ಅದು ನಿಜದ ಅರ್ಥದಲ್ಲಿ ನಾಡಿಗೆ ನಷ್ಟ...... ನಷ್ಟ.

ಕಲಬುರ್ಗಿಯವರ ಸಾವಿನ ಪ್ರಕರಣವನ್ನು, ಕೊಲೆಯ ಸಂದರ್ಭವನ್ನು ಇನ್ನೊಂದು ಮಗ್ಗುಲಲ್ಲಿಟ್ಟೂ ನಾನು ನೋಡ ಬಯಸುತ್ತೇನೆ. ಮೇಲಿನ ಎಲ್ಲ ಮಾತುಗಳನ್ನು ಒಪ್ಪಿ ಆಡಿಯೂ ಒಂದು ಮಾತನ್ನು ಹೇಳಬೇಕು. ಸಂಶೋಧಕ ಅಥವಾ ಒಬ್ಬ ಲೇಖಕ ತನ್ನ ಅಭಿಮತದ ಪ್ರಕಟಣೆ ಹಾಗೂ ಪ್ರತಿಪಾದನೆಯಲ್ಲಿ